ಕರ್ನಾಟಕ ಪರೀಕ್ಷಾ ಪ್ರಾಧಿಕಾರ
Karnataka Examinations Authority

ಸಂಖ್ಯೆ: ಇಡಿ/ಕೆಇಎ/ಯುಜಿಸಿಇಟಿ-ಯುಜಿನೀಟ್/2025

ದಿನಾಂಕ: 29-08-2025

ಪ್ರಕಟಣೆ

**ಇಂಜಿನಿಯರಿಂಗ್, ಆರ್ಕಿಟೆಕ್ಚರ್, ಯೋಗ ಮತ್ತು ನ್ಯಾಚುರೋಪತಿ, ಕೃಷಿ ವಿಜ್ಞಾನ, ವೆಟರಿನರಿ, ಬಿಎಸ್‌ಸಿ (ನರ್ಸಿಂಗ್) ಬಿ-ಫಾರ್ಮ, ಫಾರ್ಮ್-ಡಿ, ಬಿಪಿಟಿ, ಬಿಪಿಒ, ಅಲೈಡ್ ಹೆಲ್ತ್ ಸೈನ್ಸ್ ಮತ್ತು ಆಯುಷ್ ಕೋರ್ಸುಗಳ 2ನೇ ಸುತ್ತಿನ ತಾತ್ಕಾಲಿಕ ಫಲಿತಾಂಶ ಹಾಗೂ**

**ವೈದ್ಯಕೀಯ, ದಂತವೈದ್ಯಕೀಯ ಕೋರ್ಸುಗಳ ಅಣುಕು / ತಾತ್ಕಾಲಿಕ ಫಲಿತಾಂಶ – 2ನೇ ಸುತ್ತು**

ಪ್ರಾಧಿಕಾರವು ಈಗಾಗಲೇ ತಿಳಿಸಿದಂತೆ ಎರಡನೇ ಸುತ್ತಿನ ಸೀಟು ಹಂಚಿಕೆಯ ಮತ್ತು ವೈದ್ಯಕೀಯ, ದಂತವೈದ್ಯಕೀಯ ಸೀಟುಗಳ ಹಂಚಿಕೆಯ ಅಣುಕು / ತಾತ್ಕಾಲಿಕ ಫಲಿತಾಂಶವನ್ನು ದಿನಾಂಕ 29-08-2025 ರಂದು ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಪ್ರಕಟಿಸಿದೆ.

1. ಎರಡನೇ ಸುತ್ತಿನ ತಾತ್ಕಾಲಿಕ ಸೀಟು ಹಂಚಿಕೆಗೆ 26-08-2025 ರ ಮಧ್ಯಾಹ್ನ 1.00 ರವರೆಗೆ ನಮೂದಿಸಿದ Options ಗಳನ್ನು ಪರಿಗಣಿಸಲಾಗಿದೆ.
2. ಇದು UGCET-UGNEET 2025 ರ ಎರಡನೇ ಸುತ್ತಿನ ಸೀಟು ಹಂಚಿಕೆಯ ತಾತ್ಕಾಲಿಕ ಫಲಿತಾಂಶವಾಗಿದ್ದು, ಅಭ್ಯರ್ಥಿಗಳು ತಾತ್ಕಾಲಿಕವಾಗಿ ಹಂಚಿಕೆಯಾಗಿರುವ ಸೀಟಿಗೆ ಕಾಲೇಜಿನಲ್ಲಿ ಪ್ರವೇಶ ಪಡೆಯುವಂತಿಲ್ಲ.
3. ಯಾವುದಾದರೂ ನಿರ್ದಿಷ್ಟ ಆಕ್ಷೇಪಣೆಗಳಿದ್ದಲ್ಲಿ (Options ಗಳನ್ನು ದಾಖಲಿಸಲಾಗಿದೆ, ಎರಡನೇ ಸುತ್ತಿನ ಕಟ್‌ಅಫ್ ರ್‍ಯಾಂಕ್ ಪರಿಶೀಲಿಸಲಾಗಿದೆ, ಆದರೆ ಯಾವುದೂ ಸೀಟು ಹಂಚಿಕೆಯಾಗಿಲ್ಲ) **ದಿನಾಂಕ 30-08-2025 ರ ಮಧ್ಯಾಹ್ನ 1.00** ರೊಳಗೆ keauthority-ka@nic.in ಗೆ ಎಲ್ಲಾ ವಿವರಗಳೊಂದಿಗೆ ಮೇಲ್ ಮಾಡಬಹುದು.
4. ಆಕ್ಷೇಪಣೆಗಳನ್ನು ಪರಿಶೀಲಿಸಿದ ನಂತರ ಎರಡನೇ ಸುತ್ತಿನ ಸೀಟು ಹಂಚಿಕೆಯ ಅಂತಿಮ ಫಲಿತಾಂಶಗಳನ್ನು ಈ ಕೆಳಗೆ ವಿವರಿಸಿರುವಂತೆ ಪ್ರಕಟಿಸಲಾಗುವುದು.

ಎಂಸಿಸಿ, ನವದೆಹಲಿ ಇವರು ಅಖಿಲ ಭಾರತ ವೈದ್ಯಕೀಯ ಸೀಟುಗಳ ಪ್ರವೇಶಕ್ಕೆ ಹೆಚ್ಚಿನ ವೈದ್ಯಕೀಯ ಸೀಟುಗಳು ಸೇರ್ಪಡೆಗೊಳ್ಳುವ ಕಾರಣದಿಂದ ಎಮ್‌ಸಿಸಿ ಎರಡನೇ ಸುತ್ತಿನ ಸೀಟು ಹಂಚಿಕೆಯ ಪ್ರಕ್ರಿಯೆಯ ವೇಳಾಪಟ್ಟಿಯನ್ನು ದಿನಾಕ 29-08-2025 ರಂದು ಪ್ರಕಟಿಸಲಾಗುವುದೆಂದು ಸೂಚಿಸಿ ಪ್ರಕಟಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ:

1. ಯುಜಿಸಿಇಟಿ – ಕೋರ್ಸುಗಳಾದ ಇಂಜಿನಿಯರಿಂಗ್, ಆರ್ಕಿಟೆಕ್ಚರ್, ಯೋಗ ಮತ್ತು ನ್ಯಾಚುರೋಪತಿ, ಕೃಷಿ ವಿಜ್ಞಾನ, ವೆಟರಿನರಿ, ಮುಂತಾದ ಕೋರ್ಸುಗಳಲ್ಲಿ ಮತ್ತು ಆಯುಷ್ ಕೋರ್ಸುಗಳಿಗೆ ಮಾತ್ರ **ಯುಜಿಸಿಇಟಿ ಎರಡನೇ ಸುತ್ತಿನ ಅಂತಿಮ ಫಲಿತಾಂಶ ಪ್ರಕಟಿಸಲಾಗುವುದು ಹಾಗೂ** ಅಭ್ಯರ್ಥಿಗಳು ವಹಿಸಬೇಕಾದ ಕ್ರಮಗಳ ಕುರಿತು ***"ಮಾರ್ಗಸೂಚಿಗಳು, ನಿಯಮಗಳು ಮತ್ತು ಸೂಚನೆ" ಗಳನ್ನು ಫಲಿತಾಂಶದೊಂದಿಗೆ ಪ್ರಕಟಿಸಲಾಗುವುದು.***

2. ಯುಜಿನೀಟ್ ವೈದ್ಯಕೀಯ – ದಂತವೈದ್ಯಕೀಯ ಕೋರ್ಸುಗಳಿಗೆ ಪ್ರಾಧಿಕಾರದಲ್ಲಿ ಎರಡನೇ ಸುತ್ತಿನಲ್ಲಿ ತಾತ್ಕಾಲಿಕವಾಗಿ ಸೀಟು ಹಂಚಿಕೆ ಮಾಡಿಕೊಂಡಿರುವ ಅಭ್ಯರ್ಥಿಗಳು ಸದ್ಯದ ಪರಿಸ್ಥಿತಿಯಲ್ಲಿ ಯಾವುದೇ ಕ್ರಮವಹಿಸದಂತೆ ಸೂಚಿಸಿದೆ. ಎಂಸಿಸಿಯವರ ವೇಳಾಪಟ್ಟಿ ಆಧರಿಸಿ ಮುಂದಿನ ಕ್ರಮಗಳ ಬಗ್ಗೆ ಪ್ರಕಟಿಸಲಾಗುವುದು. ವೆಬ್‌ಸೈಟಿಗೆ ಭೇಟಿ ನೀಡುತ್ತಿರಲು ಸೂಚಿಸಲಾಗಿದೆ. [ಎಂಸಿಸಿಯವರು ತಮ್ಮ ವೇಳಾಪಟ್ಟಿಯ ಬಗ್ಗೆ ಯಾವುದೇ ತೀರ್ಮಾನ ಪ್ರಕಟಿಸದ ಹಿನ್ನೆಲೆಯಲ್ಲಿ ಅನಿವಾರ್ಯವಾಗಿ ಈ ರೀತಿ ತೀರ್ಮಾನಿಸಲಾಗಿದೆ.]

ಕಾರ್ಯನಿರ್ವಾಹಕ ನಿರ್ದೇಶಕರು.

**18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012**
18th Cross, Sampige Road, Malleshwaram, Bengaluru - 560 012.
Phone: 080 - 23 564 583 Helpline : 080 - 23 460 460.
e-mail : keauthority-ka@nic.in Website : http://kea.kar.nic.in

ಕರ್ನಾಟಕ ಪರೀಕ್ಷಾ ಪ್ರಾಧಿಕಾರ
Karnataka Examinations Authority

No. ED/KEA/ UGCET-UGNEET/2025 Date: 29-08-2025

## NOTE

**2nd round provisional seat allotment results to Engineering, Architecture, Yoga & Naturopathy, Farm Sciences, Veterinary, B.Sc (Nursing), B.Pharma, Pharm-D, BPT, BPO, Allied Health Sciences and AYUSH courses and mock / Provisional seat allotment results to Medical and Dental Courses – 2nd round**

As mentioned, KEA has published the second round seat allotment results and the mock / provisional results for Medical & Dental seat allotment on the KEA Website on 29-08-2025.

1. The options submitted till 1.00 pm on 26-08-2025 have been considered for the second round of provisional seat allotment.
2. This is the provisional result of the second round seat allotment of UGCET-UGNEET 2025 and candidates cannot take admission in the college for the provisionally allotted seat.
3. Any specific objections (e.g., 2nd round cutoff rank has been checked, but no seat has been allotted) may be mailed to keauthority-ka@nic.in by 1.00 PM on 30-08-2025 with all the details.
4. After checking the objections, the final results of the second round of seat allotment will be announced as explained below;

MCC, New Delhi has informed that the schedule of the MCC second round of seat allotment process would be announced on 29-08-2025 due to the addition of more medical seats to the All India Medical Seats Entrance. In this context:

1. UGCET – The final results of the second round of UGCET will be announced only for courses like Engineering, Architecture, Yoga and Naturopathy, Agricultural Sciences, Veterinary, etc. and AYUSH courses and the "**Guidelines, Regulations and Instructions**" regarding the steps to be taken by the candidates will be announced along with the results.

2. Candidates who have provisionally been allotted seats in the second round of UGNEET Medical – Dental courses by KEA are advised not to take any action in the current situation. Further action will be announced based on the schedule of MCC. It is advised to keep visiting the website. [This decision has been made in the background of MCC not announcing any decision regarding its schedule.]

Executive Director.

18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012
18th Cross, Sampige Road, Malleshwaram, Bengaluru - 560 012.
Phone: 080 - 23 564 583 Helpline : 080 - 23 460 460.
e-mail : keauthority-ka@nic.in Website : http://kea.kar.nic.in